(*iii*) *re : removal of huts in Bommanapura lane of Hubli City,*

SRI KAGODU THIMMAPPA. (Sagar).— I call the attention of the Hon. Chief Minister to the atrocities on harijan families of Bommanapura lane, Hubli Town.

SRI D. DEVARAJ URS (Chief Minister).— I wish to make the following Statement :—

There are 23 huts in Survey No. 73, measuring 3,290 Square yards, situated in Bomapur Goudor Hakal in Hubli City. of these 23 huts, two are vacant, seven are occupied by Harijan, six by Rajputs one by a Panchar and seven by Muslims. One Sri R. M. Chatni purchased this land on 25th April 1974 for Rs. 25,00)/— from the original owner and the purchase deed is also executed legally. Necessary entries are also made in the connected records in name of Sri R. M. Chatni. There after, Sri Chatni started asking the residents to vacate the site. some of the residents vacated voluntarily after executing a consent letter and also accepting some compensation. but the other residents did not not like to vacats and objected to Sri Chatni interfering with them.

On 28th Feburary 1975 there was likelihood of breach of peace, as booth the parties started arguing over the movement of a lorry with timber belonging to Sri R. M. Chatni. The Hirjans and others tried to prevent the lorry from going to Sri Chatnies timber yard. when this came to the notice of the police, prompt action was taken by the officers who visited the spot and averted a breach of the peace. On 1st March 1975, as there was trouble again on the disputed land, a case was put up under section 160 af I.P.C. against Sri Chatni and two others on one side and Ningappa Koli, Siddawwa Yallamma Koli, Gangawwa and Yellamma on the other side in Crime No. 47/75. The case was charge sheeted on the same day and it is pending trial.

Both the parties have started fighting over the right to use the passage in the disputed land to the timber yard of Sri R. M. Chatni. As already stated, some parties vacated voluntarily after taking Some compensation It is those vacated huts that Sri. Chatni is alleged. to have pulled down After the matter came to the notice of the police, who took action as stated above, there has been no further demolition of any hut.

In this dispute between Sri Chatni and the tenants, one Kodagali a Railway employee, started interfering taking interest on behalf of the Hirijan tenants. This Kodagalli is interested in extracting money from both the parties Sri Chatni has got the documents in his favour regarding the land. The Harijans and other tenants have not chosen to establish there right by legal means. The situation is being exploited by Kodagali. Enquiries further reveal that those tenants have been living there since a long time paying Municipal Tax. The

huts were put up at their own cost. It is false to say that Harijans were beaten in the presence of the police on 1st March 1975. It is also false to say that when the complainant went to lodge a complaint in the Police Station, the Harijans were threatened by the Police. Sri Chatni has also been sending telegrams and petitions asking for Police help. The news item in the press appears to be the out come of Kodagalis frustration as he was neither able to win over the Harijans, nor is in a position to black mail the owner. Regarding the allegation that Senior officer himself abused Harijans, it is reported that Kodagali was under th impression that Sri. Siddalingu, the Additional Superintendent of Police, would help him as both are Harijans. But Sri Siddalingu to action according to law and as such Sri Kodagali is sore about it and has therefore misrepresented the facts to the Press.

ಶ್ರೀ ಕಾಗೋಡು ತಿಮ್ಮಪ್ಪ.—ಚಟ್ನಿ ಎನ್ನತಕ್ಕವರು ಏಪ್ರಿಲ್ ೧೯೭೪ರಲ್ಲಿ ಇದನ್ನು ಕ್ರಯಕ್ಕೆ ಪಡೆದುಕೊಂಡಿದ್ದರು. ಆದಕ್ಕಿಂತ ಹಿಂದೆ ಬೇರೆಯವರಿಗೆ ಅದು ಸಂಭಂಧಪಟ್ಟಿತು. ಪ್ಯಾರ ೪ರಲ್ಲಿ ಏನು ಹೇಳಿದ್ದಾರೆಂದರೆ "Enquiries further reveal that these tenants have been living there since a long time paying Municipal Tax. The huts were put up at their own cost." ಎಂದು ಹೇಳಿದ್ದಾರೆ. ಕೆಲವರಿಗೆ ಪರಿಹಾರ ಕೊಟ್ಟು ಬಿಡಿಸಿ ಕೊಂಡಿದ್ದಾರೆ. ಈಗ ಏನಾಗಿದೆ ಎಂದರೆ ಐಪಿಸಿ ೧೪೧ರ ಪ್ರಕಾರ ಒಂದು ಕೇಸ್ ಹಾಕಿದ್ದಾರೆ. ಇದು ಇಬ್ಬರು ಕಾದಾಡಿ ದೂರು ಕೊಟ್ಟಾಗ ಇಬ್ಬರ ಮೇಲೂ ಕೇಸು ಹಾಕುವುದಕ್ಕೆ ಅನ್ವಯಿಸುವುದಾಗಿದೆ. It is admittedly very clear that these persons were in legal position. ಅಕ್ರಮವಾಗಿ ಪ್ರವೇಶ ಮಾಡಿದರೆ ಅವರ ಮೇಲೆ ಟ್ರೆಸ್ ಪಾಸ್ ಕೇಸ್ ಹಾಕಬೇಕಾಗಿತ್ತು. ಅದನ್ನು ಬಿಟ್ಟು ಈಗ ಪೋಲೀಸಿನವರು ಇಬ್ಬರ ಮೇಲೂ ಕೇಸ್ ಹಾಕಿಬಿಟ್ಟಿದ್ದಾರೆ. ಇಬ್ಬರ ಮೇಲೂ ಕೇಸ್ ಹಾಕುವುದು ನ್ಯಾಯವಲ್ಲ. The harijans and other tenants have not chosen to establish their right by legal means.

ಶ್ರೀ ಡಿ. ದೇವರಾಜ ಅರಸ್.—ಇರುವ ವಿಷಯವನ್ನು ಏತಕ್ಕೆ ಹೇಳಬಾರದು.

ಶ್ರೀ ಕಾಗೋಡು ತಿಮ್ಮಪ್ಪ. ಸ್ವಾಧೀನದಲ್ಲಿದ್ದರೆ, ತೊಂದರೆ ಬಂದಾಗ ರಕ್ಷಣೆ ಕೊಡಬೇಕಾದುದು ರಕ್ಷಣಾ ಇಲಾಖೆಯ ಕರ್ತವ್ಯ. ಏನಾದರೂ ಅಡೆತಡೆ ಹಾಕಿದರೆ ಕೋರ್ಟಿಗೆ ಹೋಗಿ ಇಂಜಕ್ಷನ್ ವಗೈರೆ ಪಡೆಯಬೇಕಾಗಿತ್ತು. ಇಲ್ಲಿ ಅಂಥ ಸನ್ನಿವೇಶ ಯಾವುದು ಇಲ್ಲ. ಆದ್ದರಿಂದ ದಯವಿಟ್ಟು ತಮ್ಮ ಅವರ ಸ್ವಾಧೀನದಲ್ಲಿರುವ ಸ್ಥತ್ತಿಗೆ ಯಾವ ಅಡೆತಡೆಯೂ ಬಾರದಂತೆ ಅವರ ಹಕ್ಕುಬಾಧ್ಯತೆಯ ರಕ್ಷಣೆ ಮಾಡುವುದರ ಜೊತೆಗೆ ಅದು ಅವರ ಸ್ವಾಧೀನಕ್ಕೆ ಬರುವ ರೀತಿಯಲ್ಲಿ ರಕ್ಷಣೆ ನೀಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನನ್ನ ಹೇಳಿಕೆ ಸ್ಪಷ್ಟವಾಗಿದೆ. ಅವರಿಗೆ ಏನೂ ತೊಂದರೆ ಇಲ್ಲ. ಪೋಲೀಸರು ಓಡಿಸಬೇಕೆನ್ನುವ ಉದ್ದೇಶವಿಲ್ಲವೆಂದು ಸ್ಪಷ್ಟವಾಗಿದೆ ಅವರು ಮುನಿಸಿಪಲ್ ಟ್ಯಾಕ್ಸ್ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ವಿಷಯ ಹೀಗಿರುವಾಗ ಪೋಲೀಸಿನವರು ಏತಕ್ಕೆ ಓಡಿಸುವುದಕ್ಕೆ ಹೋಗುತ್ತಾರೆ ? ವಾಲೆಂಟಿರಿಯಾಗಿ ಅವರೇ ಹೋಗಿರಬಹುದು, ಇದು ಏತಕ್ಕೆ ಏನು ಎನ್ನುವುದು ಸ್ಪಷ್ಟವಾಗಿಲ್ಲ. ಜಗಳ ಮಾಡುವ ಸನ್ನಿವೇಶ ಏನಿತ್ತು, ಏತಕ್ಕೆ ಹೋದರು those are all matters of detail which we have to look into. ಯಾರು ಉಳಿದಿದ್ದಾರೆ ಅವರನ್ನು ಪೋಲೀಸಿನವರ ಮುಖೇನ ಬಿಡಿಸಲು ಪ್ರಯತ್ನ ಮಾಡಿಲ್ಲ, ಆದೇಶ ಕೊಟ್ಟಿಲ್ಲ ? ಪ್ರಯತ್ನವಟ್ಟು ಅವರನ್ನು ಓಡಿಸ ಬೇಕೆಂದು ಇಲ್ಲ, ಲೀಗಲ್ ಆಗಿ ಅದು ಕೋರ್ಟಿಗೆ ಬಂದಿದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈಗ ತಿಮ್ಮಪ್ಪನವರು ೧೪೧ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿದ್ದಾರೆ ಎಂದು ಹೇಳಿದರು. ಟ್ರೆಸ್‌ಪಾಸ್ ಕೇಸ್ ಅವರ ಮೇಲೆ ಹಾಕಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತಾವು ಸ್ಟೇಟ್‌ಮೆಂಟ್ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. Because Government has admitted that they are in legal position by paying municipal tax.

ಶ್ರೀ ಡಿ. ದೇವರಾಜ ಅರಸ್.—ಲೀಗಲ್ ಆಗಿ ಇರುವುದರಿಂದ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೆ, They are tiue legal position ಎಂಬುದನ್ನು ಅವರೇ ಒಪ್ಪಿಕೊಂಡಮೇಲೆ ಚಟ್ಟಿ ಎನ್ನತಕ್ಕವರು ವ್ಯಾಜ್ಯ ಮಾಡಬೇಕಾದರೆ be must go to the court of law. ಆದರೆ ಪಾಪ, ಅವರು ಹೋಗಿಲ್ಲ. ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟಪಡಿಸಬೇಕು, ಅವರಿಗೆ ಲೀಗಲ್ ಪೊಜಿಷನ್ ಇದ್ದರೆ—ತಮ್ಮ ಮಾತಿನಲ್ಲಿ ಒಪ್ಪಿಕೊಂಡಿದ್ದರೆ ಸಂತೋಷ — ಲೀಗಲ್ ಆಗಿ ಅವರು ಕೋರ್ಟಿಗೆ ಹೋಗಬೇಕಾಗಿಲ್ಲ. ಚಟ್ಟಿ ಎನ್ನತಕ್ಕವರು ಕೋರ್ಟಿಗೆ ಹೋಗಬೇಕು ಎನ್ನುವ ಮಾತು, ಸ್ಟೇಟ್‌ಮೆಂಟ್‌ನಲ್ಲಿ ಬರಬೇಕಾಗಿತ್ತು ಪತ್ರಿಕಾ ವರದಿಯ ಪ್ರಕಾರ ಹಲ್ಲೂ ಕೂಡ ಮುರಿದು ಹೋಗಿದೆ ಎಂದು ವರದಿಯಾಗಿದೆ. ಮುರಿದಿದ್ದರ ಬಗ್ಗೆ ನಾನು ಹೇಳಲಿಲ್ಲ. The Police has not taken action on the persons who have abused or assaulted the persons ಹಲ್ಲು ಕಳೆದುಕೊಂಡು ಬಿಟ್ಟಿದ್ದಾರೆ, ಎರಡನೆಯದು ಅವರ ಮೇಲೆ ಲೀಗಲ್ ಆಕ್ಷನ್ ತೆಗೆದು ಕೊಳ್ಳುವುದರ ಜೊತೆಗೆ ಅವರನ್ನು ಕೋರ್ಟಿಗೆ ಕಳುಹಿಸಬೇಕು. ಇವರಿಗೆ ಸಂಪೂರ್ಣವಾಗಿ ಪೋಲೀಸ್ ರಕ್ಷಣೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಸ್ಪಷ್ಟವಾಗಿಯೇ ಇದೆ. ಆದುದರಿಂದ ತಾವು ಇದನ್ನು ಪೂರ್ತಿಯಾಗಿಯೇ ಸ್ವಾಗತ ಮಾಡಬೇಕು. ಏಕೆಂದರೆ ಒಂದು ಭಾಗದ ಜನ ಮಾತನಾಡಿಕೊಂಡು ಮುಂದು ತೆಗೆದುಕೊಂಡು ಕೆಲವು ಜನರನ್ನು ಬಿಟ್ಟುಬಿಟ್ಟಿದ್ದಾರೆ. ಕೆಲವು ಜನ ನಾವು ಬಿಡುವುದಿಲ್ಲ ಎಂದು ಹೇಳಿದ್ದಾರೆ. *status-qho* ಯಾವ ಕಾರಣದಿಂದಲೂ ಜಸ್ಟಿಫೈ ಮಾಡುವುದಕ್ಕೆ ಹೋಗಿಲ್ಲ, ಹೋಗುವುದೂ ಇಲ್ಲ. ಲೀಗಲ್ ರೈಟ್‌ಗೆ ಕಾರ್ಪೋರೇಷನ್ ಇದೆ. ಇದು ಹುಬ್ಬಳ್ಳಿ-ಧಾರವಾಡಕ್ಕೆ ಸೇರಿದ್ದು ಅಂತ ಕಾಣುತ್ತದೆ. ಅವರೂ ಅದನ್ನೂ ನೋಡಲಿ. ಪೋಲೀಸ್ ಇಲಾಖೆ ಪೀಸ್ ಮೈನ್‌ಟೇನ್ ಮಾಡಬೇಕಾದ್ದು ಅವರ ಕರ್ತವ್ಯ. ಇವರು ಒಂದು ಭಾಗದಲ್ಲಿ ಹೋಗಿಬಿಟ್ಟಿದ್ದಾರೆಂದು ಗೊತ್ತಾಗಿದೆ. ಒಂದು ಭಾಗದಲ್ಲಿ ಇದ್ದ ಜನರನ್ನು ಬಿಡಿಸಿಬಿಟ್ಟಿದ್ದಾರೆ ಅವರು ಹೋಗಿ ತಮ್ಮ ಪೊಜಿಷನ್‌ಟ್ಟಿಗೆದುಕೊಂಡಿದ್ದಾರೆ. ಇವರು ಅಲ್ಲಿಗೆ ಹೋದಾಗ ಈ ಗಲಾಟೆ ಮಾಡಿದರು ಎಂದು ಬಂದಿದೆ. ಈಗ ಇರುವವರನ್ನು ಜಬರ್‌ದಸ್ತ್ ಮಾಡಿ ಬಿಡಿಸುವುದಕ್ಕೆ ಪೋಲೀಸರು ಹೋಗುವುದಿಲ್ಲ. ಲೀಗಲ್ ಆಗಿ ಯಾವ ಯಾವ ಸಂದರ್ಭದಲ್ಲಿ ಏನೇನು ತೀರ್ಮಾನವಾಗಬೇಕೋ ಆಗಲಿ. *status-quo* ಮೈನ್‌ಟೇನ್ ಮಾಡುವುದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಲ್ಲು ಮುರಿದವರ ಮೇಲೆ ದೂರು ಕೊಡುವುದಕ್ಕೆ ಹೋದರೆ ಅಲ್ಲಿ ದೂರು ತೆಗೆದುಕೊಳ್ಳುತ್ತಿಲ್ಲ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಗಾಯ ಕಂಡ ಕಡೆ ನೊಣಗಳು ಬರುವ ಹಾಗೆ ಬರುತ್ತಾರೆ. ಅವರಿಗೆ ಇದೇ ಸಂದರ್ಭ.

(*iv*) *re* :— *non Providing of guest house cars to the Central Ministers.*

ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಕೇಂದ್ರ ಮಂತ್ರಿಗಳು ರಾಜ್ಯಕ್ಕೆ ಭೇಟಿ ನೀಡಿದಾಗ ಅವರಿಗೆ ಅತಿಥಿ ಗೃಹದ ಕಾರುಗಳನ್ನು ಒದಗಿಸದಿರುವುದರಿಂದ ಉಂಟಾಗಿರುವ ಅನಾನುಕೂಲತೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಕೇಂದ್ರ ಸರ್ಕಾರದ ಮಂತ್ರಿಗಳು ರಾಜ್ಯದಲ್ಲಿ ಸಂಚಾರ ಮಾಡುವ ಸಲುವಾಗಿ ರಾಜ್ಯ ಸರ್ಕಾರದವರು ವಾಹನ ಸೌಕರ್ಯ ಒದಗಿಸದೆ ಇರುವ ಬಗ್ಗೆ, ನಾನು ಈ ಹೇಳಿಕೆ ನೀಡುತ್ತೇನೆ.

ರಾಜ್ಯ ಸರ್ಕಾರದ ''ಅತಿಥಿ ಸತ್ಕಾರ'' ನಿಬಂಧನೆಗಳ ಪ್ರಕಾರ ಕೇಂದ್ರ ಹಾಗೂ ಇತರ ರಾಜ್ಯಗಳ ಮಂತ್ರಿಗಳು, ರಾಜ್ಯ ಮಂತ್ರಿಗಳು, ಉಪಮಂತ್ರಿಗಳು ರಾಜ್ಯಕ್ಕೆ ಕಾರ್ಯ ನಿಮಿತ್ತವಾಗಿ ಭೇಟಿ ಕೊಡುವಾಗ ಅವರನ್ನು ''ಸರ್ಕಾರಿ ಅತಿಥಿ''ಗಳನ್ನಾಗಿ ಪರಿಗಣಿಸಲಾಗುತ್ತಿದೆ. ''ಸರ್ಕಾರಿ ಅತಿಥಿ''ಗಳಿಗೆ ಉಚಿತವಾಗಿ ವಸತಿ ಮತ್ತು ಊಟ ವ್ಯವಸ್ಥೆಯನ್ನು ಮಾಡಲಾಗುತ್ತಿದೆ, ರಾಜ್ಯದಲ್ಲಿ ಪ್ರವಾಸ ಮಾಡಲು, ಈ ಸರಕಾರಿ ಅತಿಥಿಗಳಿಗೆ ಅತಿಥಿ ಗೃಹದ (ಸರಕಾರಿ) ವಾಹನಗಳನ್ನು ಉಚಿತವಾಗಿ ಉಪಯೋಗಿಸಲು ಒದಗಿಸಲಾಗುತ್ತಿತ್ತು.